

ಶಾಂತಿ ಜ್ಯೋತಿಯ ಎದುರಿಗೆ ಇರುವ ಪುಟ್ಟ ಬುದ್ಧನ ಪ್ರತಿಮೆ



ಶಾಂತಿ ಜ್ಯೋತಿ



ಪುಷ್ಕರಣಿಯ ಬಳಿ ಬೋಧಿ ವೃಕ್ಷದ ಸುತ್ತಲೂ ಕುಳಿತಿರುವ ಬೌದ್ಧ ಸನ್ಯಾಸಿಗಳು

ಬುದ್ಧ ಹುಟ್ಟಿದಾಗ ಕೈ ಮೇಲೆ ಮಾಡಿ ಏಳು ಹೆಜ್ಜೆ ಹಾಕಿದ ಬೃಹತ್ ಮೂರ್ತಿಯನ್ನು ಸ್ಥಾಪಿಸಿದ್ದಾರೆ. ಇತರೆಡೆಗಳಲ್ಲಿ ಜ್ಞಾನೋದಯದ ನಂತರದ ಬುದ್ಧನ ಮೂರ್ತಿಗಳನ್ನು ಕಂಡರೆ, ಇಲ್ಲಿನ ಮೂರ್ತಿ ಬಾಲ ಸಿದ್ಧಾರ್ಥನದು. 1100 ಕೆಜಿ ತೂಕದ  ಕಂಚಿನ ಪ್ರತಿಮೆ ಲುಂಬಿನಿ ವನಕ್ಕೆ ಥಾಯ್ಲೆಂಡ್ ಕೊಡುಗೆ.

ಮಗ ದೊಡ್ಡವನಾದ ಮೇಲೆ ಅವನನ್ನು ಕರೆದುಕೊಂಡು ಮತ್ತೆ ಲುಂಬಿನಿಗೆ ಬನ್ನಿ ಸಿಸ್ಟರ್ ಎಂದು ಆ ಅಧಿಕಾರಿ ಆಹ್ವಾನಿಸಿದರು. ನಾವು ಆಗಲೆಂಬಂತೆ ನಕ್ಕು ತಲೆಯಾಡಿಸಿದೆವು. ಬೀಳ್ಕೊಡುವ ಮುನ್ನ ನಮ್ಮ ಡ್ರೈವರ್ ಗೆ ತಮ್ಮ ಮೊಬೈಲ್ ನಂಬರ್ ನೀಡಿ, ಏನಾದರೂ ಸಮಾಸ್ಯೆಯಾದರೆ ಕರೆ ಮಾಡುವಂತೆ ತಿಳಿಸಿದರು. ಅಷ್ಟು ಮಾತ್ರವಲ್ಲ, ನಾವು ಉಳಿದುಕೊಂಡಿದ್ದ ಹೋಟೆಲಿನ ಮ್ಯಾನೇಜರಿಗೆ ಫೋನ್ ಮಾಡಿ ನಮ್ಮ ಕಾರಿಗೆ ಡೀಸೆಲ್ ಕೊಡಿಸುವ ವ್ಯವಸ್ಥೆಯನ್ನೂ ಮಾಡಿದರು. ಅಲ್ಲಿರುವ ಎಲ್ಲಾ ಮೊನಾಸ್ಟರಿಗಳಿಗೂ ನಮ್ಮನ್ನು ಕರೆದುಕೊಂಡು ಹೋಗುವಂತೆ ಡ್ರೈವರ್‌ಗೆ ಸೂಚಿಸಿ ನಮ್ಮನ್ನು ಬೀಳ್ಕೊಟ್ಟರು. ಅಲ್ಲಿಂದ ಹೊರಟ ನಾವು ಆ ಅಧಿಕಾರಿಯ ಬಗ್ಗೆ ಮೆಚ್ಚುಗೆ ಸೂಚಿಸಿದಾಗ, ಡ್ರೈವರ್ ನಮಗೆ ಅಚ್ಚರಿಯ ಸಂಗತಿಯೊಂದನ್ನು ತಿಳಿಸಿದ. ಆ ಅಧಿಕಾರಿಯ ತಂಗಿ ನೋಡಲು ನನ್ನ ಹಾಗೆಯೇ ಇದ್ದು ಆಕೆಗೂ ಒಬ್ಬ ಪುಟ್ಟ ಮಗನಿದ್ದಾನೆ, ಅವನ ಹೆಸರೂ ಸಿದ್ಧಾರ್ಥ! ಬಹುಶಃ ಅದೇ ಕಾರಣಕ್ಕೆ ಅವರು ನಮಗೆ ಅಷ್ಟು ಆದರದಿಂದ ಎಲ್ಲವನ್ನೂ ತೋರಿಸಿದರು ಎಂದೂ ತಿಳಿಸಿದ.

## ವಿಶಾಲ ಪ್ರದೇಶ

1978ರಲ್ಲಿ ಜಪಾನೀ ವಾಸ್ತುಶಿಲ್ಪಿ ಕೆನ್ಝೋ ತಾಂಗೆ ಹಾಕಿಕೊಟ್ಟ ವಿನ್ಯಾಸದ ಮೇಲೆ ನಿರ್ಮಾಣವಾಗಿರುವ ಲುಂಬಿನಿಯಲ್ಲಿ ಹಲವು ಮೊನಾಸ್ಟರಿಗಳು ಮತ್ತು ಸರೋವರಗಳಿವೆ. ನಾವು ಹೋದಾಗಲೂ ಕೆಲವು ಬೌದ್ಧ ಕಟ್ಟಡಗಳು ಇನ್ನೂ ನಿರ್ಮಾಣದ ಹಂತದಲ್ಲಿದ್ದವು. ಲುಂಬಿನಿ ಬಹಳ ವಿಶಾಲವಾಗಿದ್ದು ಪೂರ್ವ ವಲಯದಲ್ಲಿ ಥೇರವಾದ ಮೊನಾಸ್ಟರಿಗಳೂ ಮತ್ತು ಪಶ್ಚಿಮ ವಲಯದಲ್ಲಿ ಮಹಾಯಾನ ಮೊನಾಸ್ಟರಿಗಳೂ ಇವೆ.

ಮಾಯಾದೇವಿಯ ದೇವಸ್ಥಾನ ಒಂದು ತುದಿಗಾದರೆ, ಮತ್ತೊಂದು ತುದಿಯಲ್ಲಿ ವಿಶ್ವ ಶಾಂತಿ ಸ್ತೂಪವಿದೆ. ಅಚ್ಚರಿಯೆಂದರೆ, ಎಲ್ಲಾ ದೇಗುಲಗಳೂ ಕಾಲುವೆಗಳಿಂದ ಸಂಪರ್ಕ ಹೊಂದಿವೆ. ಇವೆರಡರ ನಡುವೆ ಹಲವು ರಾಷ್ಟ್ರಗಳ ದೇಗುಲಗಳು ಹರಡಿಕೊಂಡಿವೆ. ನಾವು ಚೀನಾ, ಬರ್ಮಾ, ಭಾರತ, ಥಾಯ್ಲೆಂಡ್, ಕೊರಿಯಾ ದೇಶಗಳ ದೇಗುಲಗಳಿಗೆ ಭೇಟಿ ನೀಡಿದೆವು. ಸಾಯಂಕಾಲವಾಗುತ್ತಿದ್ದ ಹಾಗೆಯೇ ಸಾಕಷ್ಟು ದೇಗುಲಗಳು ಮುಚ್ಚಿದ್ದವು.

1997ರಲ್ಲಿ ಲುಂಬಿನಿಯನ್ನು ಯುನೆಸ್ಕೊ ವಿಶ್ವಮಾನ್ಯ ತಾಣವಾಗಿ ಘೋಷಿಸಿದೆ. ಕಠ್ಮಂಡುವಿನಿಂದ ಎಂಟು ಗಂಟೆಗಳ ಪ್ರಯಾಣ ಮಾಡಿ ಲುಂಬಿನಿ ತಲುಪಬೇಕಾಗುತ್ತದೆ. ಭೈರಹವಾದಲ್ಲಿರುವ ಗೌತಮ ಬುದ್ಧ ವಿಮಾನ ನಿಲ್ದಾಣದಿಂದ 30 ನಿಮಿಷದ ಹಾದಿ. ಪ್ರವಾಸಿಗರ ಸಂಖ್ಯೆ ಬೌದ್ಧ ಹಬ್ಬಗಳಲ್ಲಿ ಹೆಚ್ಚಿರುತ್ತದೆ. ಬಹುತೇಕ ಪ್ರವಾಸಿಗರು ಮಾಯಾದೇವಿ ದೇವಸ್ಥಾನಕ್ಕೆ ಭೇಟಿ ನೀಡಿ ಲುಂಬಿನಿಯಿಂದ ವಾಪಸ್ಸಾಗುತ್ತಾರೆ. ಇಡೀ ಲುಂಬಿನಿಯನ್ನು ಕಾಣಲು, ಅದರ ಸೊಬಗನ್ನು ಸವಿಯಲು, ಅಲ್ಲಿನ ಶಾಂತಿಯನ್ನು ನಮ್ಮೊಳಗೆ ಆವಾಹನೆ ಮಾಡಿಕೊಳ್ಳಲು ಒಂದೆರಡು ದಿನಗಳೇ ಬೇಕಾಗುತ್ತವೆ.